ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ನಾನು ಪಿಯುಸಿ ವರೆಗೆ ಕಲಿತಿದ್ದೇನೆ. ನನ್ನ ತಂದೆಯ ಆಸ್ತಿಯಲಿ ಭಾಗ ಕೇಳಿ ದಾವೆ ಸಲ್ಲಿಸಿರುತ್ತೇನೆ. ನಮ್ಮ ತಂದೆಯ ಕುಟುಂಬದ ವಂಶವೃಕ್ಷ ಹಾಜರುಪಡಿಸಿರುತ್ತೇನೆ. ನನ್ನ ತಂದೆ ನಾನು ಚಿಕ್ಕ ವಯಸ್ಸಿ ನಲ್ಲಿ ಇದ್ದಾಗಲೇ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನ್ನ ಮದುವೆಯಾದ 10-12 ವರ್ಷಗಳ ನಂತರ ತೀರಿಕೊಂಡಿರುತ್ತಾರೆ. ನಾನು ನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಸಹೋದರಿಯ ಮದುವೆಯನ್ನು ಪ್ರತಿವಾದಿಗಳು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗಳು ಇಂಜಿಯರಿಂಗ್ ಪದವಿ ಕಲಿತಿರುತ್ತಾರೆ. ನನ್ನ ಮಗಳ ವಿದ್ಯಾಭ್ಯಾಸಕ್ಕೆ ನನ್ನ ಅಣ್ಣ ಸಹಾಯ ಮಾಡಿರುತ್ತಾರೆ ಎಂದರೆ ಇಲ್ಲ ನಾನು ಮನೆ ಕೆಲಸ ಮಾಡಿ ವಿದ್ಯಾಭ್ಯಾಸ ಮಾಡಿಸಿರುತ್ತೇನೆ. ನನ್ನ ಅಕ್ಕ ಮಗ ಎಂ.ಬಿ.ಬಿ.ಎಸ್ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸರಿ. ಅವರ ವಿದ್ಯಾಭ್ಯಾಸಕ್ಕೆ 2ನೇ ಪ್ರತಿವಾದಿ ನನ್ನ ಅಣ್ಣ ಪೇಮೆಂಟ್ ಸೀಟ್ ಗೆ ಹಣ ಕೊಟ್ಟಿರುತ್ತಾ ರೆ ಎಂದರೆ ಸರಿಯಲ್ಲ,

ದಾವಾ ಆಸ್ತಿಗೆ ಸಂಬಂಧಿಸಿದಂತೆ ಓ.ಎಸ್.18/2017ರಂತೆ ದಾವೆ ನಡೆಯುತ್ತಿದೆ ಎಂದರೆ ಸಾಕ್ಷಿ ಹೌದು ಪಕ್ಕದ ಜಮೀನಿನವರು ಒತ್ತುವರಿ ಮಾಡಿಕೊಂಡಿರುವ ಕಾರಣ ಸಲ್ಲಿರುತ್ತಾರೆ ಎಂದು ನುಡಿಯುತ್ತಾರೆ. ದಾವೆ ನಡೆಯುತ್ತಿರುವಾಗ ನನ್ನ ತಾಯಿ ತೀರಿಕೊಂಡಿದ್ದು ನಾವುಗಳು ವಾರಸುದಾರರಾಗಿ ಬಂದಿರುತ್ತೇವೆ ಎಂದರೆ ಸರಿ. ಆ ದಾವೆಯ ಖರ್ಚು ವೆಚ್ಚಗಳನ್ನು 2ನೇ

ಪ್ರತಿವಾದಿಗಳು ನಿರ್ವಹಿಸಿರುತ್ತಾರೆ ಎಂದರೆ ಸರಿ. ಆ ದಾವೆಯನ್ನು ಕೆ.ಬಿ. ಬೈರೇಗೌಡರವನ್ನು ಹಾಕಲಾಗಿರುತ್ತದೆ. ಅವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ.

ಪಂಚಾಯಿತಿ ಮಾಡಿದಾಗ ನನ್ನ ಇಬ್ಬರು ಅಣ್ಣಂದಿರು ಮತ್ತು ನನ್ನ ಅಕ್ಕ ಇದ್ದೆವು. ನಾನು ಭಾಗ ಕೇಳಿರುವುದಿಲ್ಲ ವ್ಯಾಜ್ಯ ಕಾರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಹಕ್ಕು ನಿವೃತ್ತಿ ಪತ್ರ ಬರೆದುಕೊಡುತ್ತೇವೆ ಎಂದು ಹೇಳಿ ನಾನು ಮತ್ತು 1ನೇ ವಾದಿ ತಲಾ 5 ಲಕ್ಷ ಹಣ ಪ್ರತಿವಾದಿಗಳಿಂದ ಪಡೆದುಕಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೆಚ್ಚು ಹಣ ಬೇಡಿಕೆ ಹಾಕಿದ್ದೆನು ಅದಕ್ಕೆ ನಾನು ಒಪ್ಪದೇ ಇರುವ ಕಾರಣ ಸುಳ್ಳು ಕೇಳು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗಳ ಮತ್ತು ನನ್ನ ಅಕ್ಕನ ಮಗನ ಮದುವೆಯನ್ನು 2ನೇ ಪ್ರತಿವಾದಿಯೇ ನಡೆಸಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಿದ ನಂತರ ನಾನು ನನ್ನ ಅಣ್ಣಂದಿರ ಜೊತೆ ಮಾಡನಾಡುತ್ತಿಲ್ಲ ಎಂದರೆ ಸರಿಯಲ್ಲ, ಮೊದಲು ಮಾತನಾಡುತ್ತಿದ್ದೆ ಈಗ ಮಾತನಾಡುತ್ತಿಲ್ಲ, ಅಕ್ರಮವಾಗಿ ನಾನು ನನ್ನ ಅಣ್ಣಂದಿರುಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.